**ದಿನಾಂಕಃ 25.10.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ನಂ.1 ಮತ್ತು 24 ರಿಂದ 26 ಪರವಾಗಿ ಶ್ರೀ ಕೆ.ಬಿ.ಬಿ. ವಕೀಲರಿಂದಃ**

ದ್ಯಾವಪ್ಪ ನನ್ನ ತಂದೆ ಮತ್ತು ಬಸಪ್ಪ ನನ್ನ ಅಜ್ಜ ಅಂದರೆ ಸರಿ. ದಾವಾ ಆಸ್ತಿಗಳು ನಿಮ್ಮ ತಂದೆಗೆ ಹೇಗೆ ಬಂದಿರುತ್ತವೆ ಎಂದರೆ ಸಾಕ್ಷಿಯು ನಮ್ಮ ತಾಯಿಯಿಂದ ಬಂದಿರುತ್ತವೆ ಅನ್ನುತ್ತಾರೆ. ದಾವಾ ಆಸ್ತಿಗಳ ಪೈಕಿ ನನ್ನ ತಂದೆ ಕೆಲವು ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಮತ್ತು ಕೆಲವು ಆಸ್ತಿಗಳು ದರ್ಖಾಸ್ತ್ ಮೂಲಕ ಬಂದಿರುತ್ತವೆ ಅಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದ ನಂತರ ದಾವಾ ಆಸ್ತಿಗಳು ನನ್ನ ಅಣ್ಣನ ಹೆಸರಿಗೆ ಖಾತೆಯಾಗಿರುತ್ತವೆ ಅಂದರೆ ಸರಿ. ನಿಮ್ಮ ತಂದೆ ಮರಣ ಹೊಂದುವ ಕಾಲಕ್ಕೆ ನಿಮ್ಮ ಮದುವೆ ಆಗಿತ್ತೋ ಅಂದರೆ ಸಾಕ್ಷಿಯು ಆಗಿತ್ತು ಎಂದು ಹೇಳುತ್ತಾರೆ. ನಿಮ್ಮ ತಂದೆ ಸಾಯುವ ಎಷ್ಟು ವರ್ಷಗಳ ಪೂರ್ವದಲ್ಲಿ ನಿಮ್ಮ ಮದುವೆಯಾಗಿರುತ್ತದೆ ಅಂದರೆ ಸಾಕ್ಷಿ 5 ವರ್ಷಗಳ ಹಿಂದೆ ಆಗಿತ್ತು ಎನ್ನುತ್ತಾರೆ. ನಿಮ್ಮ ಗಂಡನ ಊರು ಯಾವುದು ಅಂದರೆ ಸಾಕ್ಷಿಯು ನನ್ನ ಹುಟ್ಟೂರಾದ ಇಂಡಿಹಳ್ಳಿ ಇರುತ್ತದೆ ಎನ್ನುತ್ತಾರೆ. ಮದುವೆಯ ಕಾಲಕ್ಕೆ ನಿನ್ನ ಗಂಡನ ಹೆಸರಲ್ಲಿ ಯಾವುದಾದರೂ ಆಸ್ತಿಗಳು ಇದ್ದವ ಅಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿನ್ನ ಮತ್ತು ಸೋದರಿಯರ ಮಧ್ಯೆ ಸಂಬಂಧ ಚೆನ್ನಾಗಿರುತ್ತದೆ ಅಂದರೆ ಸರಿ. ನಿನ್ನ ಸೋದರಿಯರು ಎಲ್ಲಿ ಇರುತ್ತಾರೆ ಅಂದರೆ ಸಾಕ್ಷಿಯು ಅವರವರ ಗಂಡನ ಊರಲ್ಲಿ ಇದ್ದರು ಅನ್ನುತ್ತಾರೆ. ನಿನ್ನ ಸೋದರಿಯರು ಮರಣ ಹೊಂದಿರುತ್ತಾರೆ ಅಂದರೆ ಸರಿ. ಈರಮ್ಮ ಯಾವಾಗ ಮರಣ ಹೊಂದಿರುತ್ತಾರೆ ಅಂದರೆ ಸಾಕ್ಷಿ 2 ವರ್ಷಗಳ ಹಿಂದೆ ಅನ್ನುತ್ತಾರೆ. ಅನ್ನಪೂರ್ಣಮ್ಮ ಯಾವಾಗ ಮರಣ ಹೊಂದಿರುತ್ತಾರೆ ಅಂದರೆ ಸಾಕ್ಷಿ 10 ವರ್ಷಗಳು ಆಗಿರುತ್ತದೆ ಅನ್ನುತ್ತಾರೆ. ನೀನು ಎಲ್ಲಿಯವರಗೆ ವಿಧ್ಯಾಭ್ಯಾಸ ಮಾಡಿರುತ್ತೀಯಾ ಅಂದೆರ ಸಾಕ್ಷಿ ಐದನೇ ತರಗತಿಯವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ ಎನ್ನುತ್ತಾರೆ. ನಿನಗೆ ಓದಲು ಮತ್ತು ಬರೆಯಲು ಬರುತ್ತದೆಯಾ ಅಂದರೆ ಸಾಕ್ಷಿ ಅಲ್ಪ ಸ್ವಲ್ಪ ಬರುತ್ತದೆ ಅನ್ನುತ್ತಾರೆ. ನಿನಗೆ ಬಸ್ ಅಪಘಾತದಲ್ಲಿ ತಲೆಗೆ ಹೊಡೆತ ಬಿದ್ದ ಕಾರಣ ನೆನಪಿನ ಶಕ್ತಿ ಕಡಿಮೆಯಾಗಿರುತ್ತದೆ ಅಂದರೆ ಸರಿ. 1989-90 ರಲ್ಲಿ ನಿನ್ನ ತಂದೆ ಅನ್ನಪೂರ್ಣಮ್ಮ ಮತ್ತು ಅವರ ಗಂಡ ದ್ಯಾವಪ್ಪ ರವರಿಗೆ ಜಂಟಿಯಾಗಿ ಸರ್ವೆ ನಂ. 66 ರಲ್ಲಿ 1 ಎಕರೆ 10 ಗುಂಟೆ ಮತ್ತು ಈರಮ್ಮನಿಗೆ ಸರ್ವೆ ನಂ. 36 ರಲ್ಲಿ 1 ಎಕರೆ 34 ಗುಂಟೆ ಜಮೀನು ಕೊಟ್ಟಿರುತ್ತಾರೆ ಅಂದರೆ ಸರಿ. ಅನ್ನಪೂರ್ಣಮ್ಮ ಮತ್ತು ಈರಮ್ಮ ರವರು ಈ ಮೇಲಿನ ಜಮೀನುಗಳನ್ನು ಸಾಗುವಳಿ ಮಾಡಿಕೂಂಡು ಬಂದಿರುತ್ತಾರೆ ಅಂದರೆ ಸರಿ.

ಪ್ರತಿವಾದಿ ನಂ. 23 ರವರ ಪರಿಚಯ ಇರುತ್ತದೆಯಾ ಅಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಹೂವಪ್ಪ ಇಂಡುವಳ್ಳಿ ಗ್ರಾಮದವರು ಅಂದರೆ ಸರಿ. 1 ನೇ ಪ್ರತಿವಾದಿ, ನಾನು ಮತ್ತು ನನ್ನ ಸೋದರಿಯರು ಪ್ರತಿವಾದಿ ನಂ. 23 ರವರಿಗೆ ದಾವಾ ಶೆಡ್ಯೂಲ್ 4 ನೇ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ ಅಂದರೆ ಸರಿಯಲ್ಲ. ನಿನ್ನ ತಂದೆ ತನ್ನ ಸ್ವಯಾರ್ಜಿತ ಆಸ್ತಿಗಳ ಬಗ್ಗೆ ಮೃತ್ಯ ಪತ್ರ ಮಾಡಿರುವ ಬಗ್ಗೆ ಗೊತ್ತಾ ಅಂದರೆ ಸಾಕ್ಷಿ ಗೊತ್ತಿಲ್ಲ ಅನ್ನುತ್ತಾರೆ. ನಿನ್ನ ತಂದೆ ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿಗೆ ಮೃತ್ಯಪತ್ರ ಮಾಡಿರುತ್ತಾರೆ ಅಂದರೆ ಸರಿ. ಮೃತ್ಯ ಪತ್ರ ಯಾರ ಬಳಿ ಇರುತ್ತದೆ ಅಂದರೆ ಸಾಕ್ಷಿ ಗೊತ್ತಿಲ್ಲ ಅನ್ನುತ್ತಾರೆ. ಮೃತ್ಯು ಪತ್ರ ಯಾರ ಬಳಿ ಇರುತ್ತದೆ ಎಂಬ ವಿಷಯ ಗೊತ್ತಿಲ್ಲದ ಕಾರಣ ಆಸ್ತಿಯಲ್ಲಿ ಪಾಲು ಬೇಕು ಎಂದು ಸುಳ್ಳು ದಾವೆ ಹಾಕಿರುತ್ತೇನೆ ಅಂದರೆ ಸರಿಯಲ್ಲ. ನಿನ್ನ ಮದುವೆಯ ಕಾಲಕ್ಕೆ ನನ್ನ ತಂದೆ ವರೋಪಾಚಾರ ಕೊಟ್ಟು ಮದುವೆ ಮಾಡಿರುತ್ತಾರೆ ಅಂದರೆ ಸಾಕ್ಷಿ ವರೋಪಾಚಾರ ಕೊಟ್ಟಿರುವುದಿಲ್ಲ ಅನ್ನುತ್ತಾರೆ. ಈರಮ್ಮ ಮತ್ತುಅನ್ನಪೂರ್ಣಮ್ಮ ರವರಿಗೆ ಆಸ್ತಿಗಳನ್ನು ಕೊಟ್ಟಿರುವ ವಿಚಾರ ಗೊತ್ತಿದ್ದರು ಸಹ ಅವರನ್ನು ಅನಾವಶ್ಯಕವಾಗಿ ಪಕ್ಷಗಾರರಾಗಿ ಸೇರ್ಪಡೆ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನೀನು ನಿನ್ನ ಸೋದರ ಮತ್ತು ಸದೋರಿಯರು ದಾವಾ ಶೆಡ್ಯೂಲ್ 4 ನೇ ಆಸ್ತಿಯನ್ನು 23 ನೇ ಪ್ರತಿವಾದಿಗೆ ಕ್ರಯ ಮಾಡಿಕೊಟ್ಟು ಬಂದ ಹಣವನ್ನು ಸಮನಾಗಿ ಹಂಚಿಕೊಂಡಿದ್ದರೂ ಸಹ ಆ ಆಸ್ತಿಯನ್ನು ಈ ದಾವೆಯಲ್ಲಿ ದುರುದ್ದೇಶದಿಂದ ಸೇರ್ಪಡೆ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನನಗೆ ಮದುವೆಯ ಕಾಲಕ್ಕೆ ವರೋಪಾಚಾರ ಕೊಟ್ಟಿರುವ ಕಾರಣ ನನಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.